104

ಒಗಟುಗಳ ಗೊಂಚಲು

('ಒಗಟುಗಳು' ಭಾಗ ೩)

★

ರಚಯಿತರು, ಸಂಗ್ರಾಹಕರು:

ಡಾ| ಎಸ್. ಪಿ. ಭಟ್,

ಮಂಗಳೂರು.

1956.

ಒಂದಾಣೆ ಮಾಲೆ

'ಬಂದಾಣೆ ಮಾಲೆ'ಯ ಪ್ರಕಟಣೆಗಳು:

೧*ಕೆಪ್ಪಟಿರಾಯ; ೨ ನಾರೀಶ್ವರರು(ದ್ವಿ. ಮುದ್ರಣ); ೩ ಕಳ್ಳನಿಗೆ ಸಂಭಾವನೆ(ದ್ವಿ. ಮುದ್ರಣ) ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮* ಇಂಗ್ಲಿಷ್-ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ (ದ್ವಿ. ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ *ಶ್ರೀ ಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ); ೧೨*ಜೀವದ ಮೌಲ್ಯ ಮತ್ತು ಇತರ ಕಥೆಗಳು; ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ. ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ. ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦ ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ-I(ದ್ವಿ. ಮುದ್ರಣ); ೨೨ ತಿರುಕ್ಕುರಲ್ (ದ್ವಿ. ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ-II (ದ್ವಿ. ಮುದ್ರಣ); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಮಾರಾವತಾರ(ದ್ವಿ. ಮುದ್ರಣ); ೨೭*ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ. ಮುದ್ರಣ]; ೨೯. ಜಾಣ್ಮೆಯ ಒಗಟುಗಳು ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಪೀಪಾಯಿಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ. ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ. ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸ[illegible]ಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಮ್; ೬೪ ಲೌಕಿಕ ನ್ಯಾಯಗಳು; ೬೫ ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ. ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ...; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧* ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು; ೮೪ ಆಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃ[illegible]ದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ [illegible]ಪದ ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂ[illegible]ದಲ್ಲಿ ಲೋಕನೀತಿ. ೯೩ ಹೋಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ; ೧೦೦ ಭಕ್ತ ಕುಚೇಲ; ೧೦೧ ಉತ್ತರನ ಪೌರುಷ; ೧೦೨ ಕುಮಾರ; ೧೦೩ ಕೇರಳ ಜ್ಯೋತಿಷ; ೧೦೪ ಒಗಟುಗಳ ಗೊಂಚಲು.

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಗಟಿನ ಗೊಂಚಲು

('ಒಗಟುಗಳು' ಭಾಗ ೩)

▪▪▪▪▪▪▪▪▪

೧ ಅಕ್ಕಪಕ್ಕದಲ್ಲಿ ಅವಳಿಮಕ್ಕಳು ಕೂತಿವೆ; ಎಷ್ಟು ತಿರುಗಿದರೂ ಒಂದು ಇನ್ನೊಂದನ್ನು ನೋಡಲಾರವು.*

೨ ಅಂಗೈಯಗಲದ ಗದ್ದೆ, ಮುಂಗೈ ತೋರದ ಕಬ್ಬು; ನೆಟ್ಟಿದು ಒಂದೇ ಕೈಬುಡ, ಆಡುದು ಒಂದೇ ಹೊನ್ನಕದರು.

೩ ಅಜ್ಜಿ ಕೂತಿದ್ದಾಳೆ, ಮಗಳು ಸುತ್ತಿಸುತ್ತಿ ಕಾರುತ್ತಾ ಇದ್ದಾಳೆ.

೪ ಅಟ್ಟದ ಮೇಲೆ ಪುಟ್ಟ ಲಕ್ಷ್ಮಿ.

೫ ಅಟ್ಟರಾ ವಾಡಿಗನ, ಸುಟ್ಟಹರು ಕುಂಟಿಗೆಯು, ಹುಟ್ಟಯು ಮೂಗ ಹರಿದರು, ಮೂವರು ಭವಗೆಟ್ಟು ಕೂಡಿಹರು.§

೬ ಅಡೀಲಿದ್ದು ಇಡೀನೆ ಹೊತ್ತು ಓಡ್ತಾರೆ, ತಿಳಿನೀರ್ಗೆ ಹೆದರಿ ಮೇಲೇರಿ ನೋಡ್ತಾರೆ.

೭ ಅಂಬಾಳೆ ನೆಲೆಯೊಂದು ಇಂಬರಿದು ತಾ ನಿಂದು ಅಂಬೆಂದು ಬೆನ್ನ ಗರಿ ತೋರ್ಪುದಾ ಮಿಗುವನಿಂಬರಿದು ಪೇಳ.§

೮ ಅಮ್ಮನನ್ನು ಕೂಡಿಕೊಂಡೇ ಮಗು ಕೂತಿದ್ದಾನೆ; ನಮ್ಮಪ್ಪ ಬಂದರೆ ಬೇರೆಯಾಗುತ್ತಾನೆ.

೯ ಅರಸು ಬೆಟ್ಟವನು ಸಂಹರಿಸಿ, ಬೆಳಸಿಗೆ ತುಂಬಿ, ಉರಿವ ಕಿಚ್ಚನು ತಂದಿರಿಸಿ ಪರಿವಾರ ತರಸುವುದನು ಕಂಡೆ.§

೧೦ ಅರುವತ್ತು ಸಿಂಹ ಒಂದಿರುವೆ ಕಚ್ಚಿದ ಕಂಡೆ; ಕೆರೆಯು ಕೋಡೊಡೆದು, ಧರೆ ಬೆಂದು, ಕೈಲಾಸ ಉರಿವುದನು ಕಂಡೆ.§

೧೧ ಅರ್ಧಚಂದ್ರಾಕಾರದೊಳಿಹುದು, ಮುದ್ದುಕೊಟ್ಟರೆ ಗದ್ದಲಿಸುವುದು, ಗದ್ದಲವು ನೆರೆದಲ್ಲಿ ಗಮನ ತೋರುವುದು.

೧೨ ಅಲ್ಲಿಲ್ಲ, ಇಲ್ಲಿಲ್ಲ, ಎಲ್ಲೂ ಇಲ್ಲ; ಆಕಾಶದಿಂದ ಬಂದರೆ ಉಂಟು, ಭೂಮಿಯಿಂದ ಬಂದರೆ ಉಂಟು.

೧೩ ಅವಳನ್ನು ಕರೆಯಲು ಹೋದಾಗ ಅವಳೇ ಬಂದಳು ಅಡ್ಡ, ಅವಳು ಹೋದ ಮೇಲೆ ಅವಳನ್ನೇ ಕಂಡೆ ಮತ್ತೆ.

೧೪ ಅವಳಿಜವಳಿ ಮಕ್ಕಳು; ಒಂದು ಅತ್ತರೆ ಇನ್ನೊಂದೂ ಅಳುವುದು; ಒಂದು ನಕ್ಕರೆ ಇನ್ನೊಂದೂ ನಗುವುದು.*

೧೫ ಅಷ್ಟಗಲ ಗದ್ದೆ, ಇಷ್ಟೊಂದು ನೀರು, ಅಲ್ಲೊಂದು ಬೇರು, ಅವರಲ್ಲಿ ಕೆಂಪು ಬುರುಬುರು.

೧೬ ಅಳುತ್ತ ಅಳುತ್ತ ಕುಡಿಯುವರು, ನಗುತ್ತ ನಗುತ್ತ ನಡಿಯುವರು.*

೧೭ ಆಕೆಯನು ತಾ ಹೋಗಿ, ಈಕೆ ಬಾರದ ಕಂಡು, ಆಕೆ ಮನೆ ಮುಖೆಸಾರಿ ನೆರೆದು ತಾ ಮರಳಿ ಮತ್ತಾಕೆಯನೆ ತಂದ.§

೧೮ ಆಗರದಲ್ಲಿ ಒಂದು ಸಾಗರ, ಸಾಗರದಲ್ಲಿ ಒಂದು ಶಂಖ, ಶಂಖದಲ್ಲಿ ಒಂದಿಷ್ಟು ತೀರ್ಥ.

೧೯ ಇದನ್ನು ಬಲ್ಲಿರೆ,ಕಾಯಿ ಮುನ್ನೂರ ಅರುವತ್ತು, ಹಣ್ಣು ಹನ್ನೆರಡು, ಗೊನೆ ಆರು, ತೊಟ್ಟೊಂದು; ಚೆನ್ನಾಗಿ ಹೇಳಿ.§

೨೦ ಇಂತ ಅಂಬಲಿಯೊಳಗೆ ನಿಂತಿರುವನವನಾರೆ, ಅಂತಕನಲ್ಲ, ಅಜನಲ್ಲ, ಅಂಬಲಿಯನೆಂತುಂಬಿರಯ್ಯ!§

೨೧ ಇಬ್ಬರ ಗೆಳೆತನ, ಇತರರ ವಿನಾಶನ.*

೨೨ ಇರಲಿಕ್ಕೆ ಉಚ್ಛಿಷ್ಟ. ಎನ್ನಿಸುವುದು ಪವಿತ್ರ.†

೨೩ ಇರಲಿಕ್ಕೆ ಕಾಕಪಿಷ್ಠೋದ್ಭವ, ಎನ್ನಿಸುವುದು ಪುಣ್ಯಕರ †

೨೪ ಇರಲಿಕ್ಕೆ ವಾಂತಿ, ಎನ್ನಿಸುವುದು ಪರಿಶುದ್ಧ.†

೨೫ ಇರಲಿಕ್ಕೆ ಶವದ ಆಚ್ಛಾದನ, ಎನ್ನಿಸುವುದು ಉತ್ಕೃಷ್ಟ.†

೨೬ ಇರುಳಿನಲ್ಲಿ ಅರಳುವ ಹೂವು, ಹಗಲಿನಲ್ಲಿ ಮುಚ್ಚುವ ಹೂವು.*

೨೭ ಇರುಳೆನ್ನದೆ ಹಗಲೆನ್ನದೆ ನಡೆಯುತಿಹನು, ಇರುವಲ್ಲಿಯೆ ಇರುತಿದ್ದು ನುಡಿಯುತಿಹನು.*

೨೮ ಇಲಿಯ ಬಿಲದಲ್ಲಿ ಹುಲಿ ಕೂಗುತ್ತೆ.†

೨೯ ಈ ಹಿಂಡಿನ ದನವು ಆ ಹಿಂಡಿಗೆ ಆಗುವುದಿಲ್ಲ, ಆ ಹಿಂಡಿನ ದನವು ಈ ಹಿಂಡಿಗೆ ಆಗುವುದಿಲ್ಲ.

೩೦ ಉಂಟು ಪಕ್ಕದಕಿನ್ನು ಪಕ್ಷಿಜಾತಲ್ಲ, ಬಿಟ್ಟರದು ಹಾರುವುದು ಗಿಡುಗತಾನಲ್ಲ; ದಿಟ್ಟರಿಗೆ ಹೆಟ್ಟುವುದು ಪೆರಣ ತನಗಿಲ್ಲ; ಸಿಟ್ಟಯೊಳು ಕುಶಲರೇ ಪೇಳಿ ನೀವೆಲ್ಲ.

೩೧ ಉಂಡೆ ಒಡೆದರೆ ಮನೆ ತುಂಬಾ ಚಿಟ್ಟೇ ಮಕ್ಕಳು.

೩೨ ಉದಯದಲಿ ಚರಿಪುದೈ ನಾಲ್ಕು ಕಾಲುಗಳಿಂದ, ಮಧ್ಯಾಹ್ನ ದಲಿ ಚರಿಪುದೆರಡರಿಂದ, ಪದ ಮೂರರಲಿ ಸಂಜೆ ವೇಳೆಯೊಳ್ ಚರಿಸು ವುದು, ಮುದದಿಂದ ಪೇಳಿರೈ ಯಾವುದಿದುವೆಂದು.†

೩೩ ಉದ್ದ ಬಂಡಿ, ಸಾವಿರ ಚಕ್ರದ ಬಂಡಿ, ಮುಚ್ಚಿದರೆ ಉರುಟುವ ಬಂಡಿ.

೩೪ ಉರಿ ಬಂದು ಬೇಲಿಯನು ಹರಿದು ಹೊಕ್ಕುದ ಕಂಡೆ, ಅರಿದಿದೂ ಬಗೆಗೆ.§

೩೫ ಊರಿಂದೂರಿಗೆ ಹೋಗುತ್ತಾನಾದರೂ ಇದ್ದಲ್ಲೇ ಬಿದ್ದಿದ್ದಾನೆ ಉದ್ದ ಬೇತಾಳ.

೩೬. ಎಣ್ಣೆಯಲಿ ಹುಟ್ಟಿಹುದು, ಎಣ್ಣೆಯನೆ ಅಳಿಸುವುದು, ಬಣ್ಣ ಬಣ್ಣದಲಿಹುದಾದರೂ ನೀರ್ ತಾಗೆ ಬಣ್ಣವೊಂದೇ ತಳೆದು ಅಳಿವುದಯ್ಯ.*

೩೭ ಎಣ್ಣೆಯಿಲ್ಲದೆ ಬತ್ತಿಯಿಲ್ಲದೆ ಉರಿಯುವ ದೀಪಗಳೆರಡು ದಣಿ ವಿಲ್ಲದೆ ಪಾಸತ್ತಿಲ್ಲದೆ ಜಗವನ್ನು ಬೆಳಗಿಸುತ್ತಿವೆ.§

೩೮ ಎತ್ತು ಗಾಣವ ನುಂಗು, ಕತ್ತರಿಯು ಕಣಿ ನುಂಗು, ಸುತ್ತಿ ಹೊಡೆವವನ ನೊಗ ನುಂಗು, ಈ ಮಾತು ಮಿಥ್ಯವೇ ಪೇಳಿ.§

೩೯ "ಎನಗೂ ಹರಿನಾಮ, ಮಾಧವನಿಗೂ ಹರಿನಾಮ; ಎನಗೂ ಜಲಶಯನ, ಮಾದವನಿಗೂ ಜಲಶಯನ; ಎನ್ನದು ಕಿರಿದೇನು, ಮಾಧವ ನದು ಹಿರಿದೇನು?" ಎಂದವನಾರು?

೪೦ ಎರಡು ಸುರಂಗಗಳಲ್ಲಿ ಹಾವುಗಳೆರಡು ಬುಸುಗುಟ್ಟುತ್ತ ಈಚೆ ಯಿಂದ ಆಚೆಗೆ ಹೋಗುತ್ತಾ ಇವೆ, ಆಚೆಯಿಂದ ಈಚೆಗೆ ಬರುತ್ತಾ ಇವೆ; ಕಣ್ಣಿಗೆ ಮಾತ್ರ ಕಾಣಿಸುವುದೇ ಇಲ್ಲ.†

೪೧ ಎಲ್ಲರ ಮನೆಗೂ ಕಳಸ, ಇದ್ದಲ್ಲಿಯೆ ತಾ ನೆಲಸ.*

೪೨ ಎಳೆಯುತ್ತಾ ಎಳೆಯುತ್ತಾ ಚಿಕ್ಕದಾಗುವುದೇನು?

೪೩ ಏರಿಯಾ ಕೆಳಗಿಲ್ಲ, ಬೇರೆ ತೋಟದೊಳಿಲ್ಲ, ದಾಳಿಯುಲಿಲ್ಲ, ಬಿಸಿಯಿಲ್ಲ.§

೪೪ ಏಳುತಲೆ ಕೆಂಪು, ಹತ್ತುತಲೆ ಬಿಳುಪು, ಆರುತಲೆ ಕಪ್ಪು ಇರುವವನಾರು?

೪೫ ಒಂಟಿ ಕಾಲಿನ ಬಂಟ, ನಾನಾರು ಹೇಳೋ ನೆಂಟ?

೪೬ ಒಂದು ಗೋಪುರ, ಅದರೊಳಗೆ ಮೂರು ಸುತ್ತುಗಳು; ಹೊರಗಿನ ಸುತ್ತು ಪಚ್ಚೆಯದು, ನಡುವಿನ ಸುತ್ತು ಬೆಳ್ಳಿಯದು, ಕೊನೆಯ ಸುತ್ತು ಚಿನ್ನದ್ದು; ಅದರೊಳಗೆ ತುಂಬ ಶಿವಲಿಂಗಗಳು.

೪೭ ಒಂದು ಬಾಳೆಹಣಿಗೆಗೆ ಐದು ಕಾಯಿಗಳು; ಅವುಗಳನ್ನು ಅಲುಗಾಡಿಸಬರುತ್ತದೆ, ಕೀಳಲು ಬರುವುದಿಲ್ಲ.

೪೮ ಒಂದು ಬೇಲಿ; ಅದರಾಚೆ ಒಂದು ದನ ಮೇಯುತ್ತಿದೆ.

೪೯ ಒಂದು ಮನೆಗೆ ಎರಡು ಕಿಟಕಿಗಳು; ಈಚೆಯ ಕಿಟಕಿ ತೆರೆದರೆ ಆಚೆಯ ಕಿಟಕಿಯೂ ತೆರೆಯುವುದು; ಈಚೆಯ ಕಿಟಕಿ ಮುಚ್ಚಿದರೆ ಆಚೆಯ ಕಿಟಕಿಯೂ ಮುಚ್ಚುವುದು.*

೫೦ ಒಂದು ಮರ ಬಿಟ್ಟ ಹೂವು ಇನ್ನೊಂದು ಮರಕ್ಕೆ ಶೋಭೆ ತರುವುದು.*

೫೧ ಒಂದು ಮರವಾಗಿ, ಮರಕ್ಕೆ ಹನ್ನೆರಡು ಕವಲಾಗಿ, ಕವಲಿಗೆ ಮೂವತ್ತು ಎಲೆಯಾಗಿ, ಹದಿನೈದು ಕಪ್ಪು, ಹದಿನೈದು ಬಿಳುಪು.

೫೨ ಒಬ್ಬ ಗರ್ಜಿಸುವ ರಾಕ್ಷಸ; ಅವನು ನಗುವಾಗ ಎಲ್ಲೆಲ್ಲೂ ಬೆಳಕು, ಅವನು ಅಳುವಾಗ ಎಲ್ಲೆಲ್ಲೂ ಕೊಳಕು.†

೫೩ ಒಬ್ಬ ತಾಯಿಗೆ ಸಾವಿರಾರು ಮಕ್ಕಳು; ಅವು ದಿನಹೋಗುತ್ತಾ ಸಣ್ಣಗಾಗುತ್ತಾ ಬರುತ್ತವೆ.

೫೪ ಒರೆಯುಂಟು ಒರೆಯದದು, ಒರೆತರೇ ಒರೆಯುವುದು, ಕೆರೆ ಬಾವಿಯೊರತೆ ತಾನಲ್ಲ.§

೫೫ ಒಲೆಯ ಮುಂದಿರುವ ಹುಲಿರಾಯನಿವನು, ಬಿಲದ ಬಾಲನನು ಕೊಲೆಮಾಡುವವನು; ಹಾಲುಮೊಸರೆಲ್ಲವನು ಕದಿಯುವವನು, ಬಾಲರನು ಉಣಿಸುವನು ಯಾರು ಇವನು?

೫೬ ಓಡುಂ ಕುದುರೆ, ಜೋಡುಂ ಕುದುರೆ, ವೆಳ್ಳಂ ಕಂಡಾಲ್ ನಿಲ್ಲುಂ ಕುದುರೆ.

೫೭ ಕಟ್ಟಿಗೆ ಹೆದರುವ ಪೆಟ್ಟಿಗೆ ಯಾವುದು?

೫೮ ಕಟ್ಟಿಬಿಟ್ಟರೆ ಕುಣಿದಾಡುವಳು, ಮುಟ್ಟಿಬಿಟ್ಟರೆ ಮುನಿದೋಡುವಳು.

೫೯ ಕಣ್ಣುಗಳು ಮೂರಿಹುದು ರುದ್ರನಲ್ಲ; ತಲೆಯಲ್ಲಿ ಜುಟ್ಟಿದೆ ಮುನೀಂದ್ರನಲ್ಲ; ಮೈಯೆಲ್ಲ ಕೂದಲಿದೆ ಜಾಂಬವತನಲ್ಲ.†

೬೦ ಕತ್ತಲಿದ್ದಲ್ಲಿ ಕುಣಿಯುತ್ತೆ, ಬೆಳಕುಬಿದ್ದಲ್ಲಿ ಅಡಗುತ್ತೆ.†

೬೧ ಕತ್ತಿಗೇ ಹರಿಯುವುದು, ಸುತ್ತಿಬರುತೇಳುವುದು, ಕಿತ್ತುಬಿಸುಡೆ ಬೆಳೆಯುದದು.§

೬೨ ಕಪ್ಪಾನೆ ಕಪ್ಪು ಕೆರೆ, ಬೆಳ್ಳಾನೆ ಬೆಳ್ಳಿ ನೀರು, ನಡುವೆ ರಾಣಿ ಕುಣೀತಾಳೆ.

೬೩ ಕರಚರಣಪದಕಿದ್ದು ಕರೆದಲ್ಲಿ ಬಾರದದು, ಕರದಿಂದ ಹುಟ್ಟಿ ಸ್ಥಿರವಾಗಿಯಿರುವುದು.§

೬೪ ಕರವುಂಟು ಕಾಲಿಲ್ಲ, ಶಿರಹರಿದ ಮುಂಡವೂ; ನರದಿ ಬಿಗಿಯುವರು.§

೬೫ ಕರಿಯಾಗಸದಲ್ಲಿ ಬಿಳಿಯ ನಕ್ಷತ್ರಗಳು; ಮಿನುಗುತ್ತವೆ, ಮರೆಯಾಗುತ್ತವೆ; ಮಿನುಗುತ್ತವೆ, ಮರೆಯಾಗುತ್ತವೆ.†

೬೬ ಕರೀಮಣಿ ಸವರಲ್ಲೆ, ಕೊರಳಿಗೇನು ಅಲ್ಲವಲ್ಲೆ.

೬೭ ಕರೆ ಕಾಣದ ಕೆರೆಯಲ್ಲಿ ಹೊಟ್ಟಿಲ್ಲದ ಬೆಳೆ.

೬೮ ಕಳ್ಳನನ್ನು ಕಟ್ಟಿಹಾಕಿದ್ದಾರೆ, ಮುಂದೆ ಪಹರೆಯವರನ್ನು ನಿಲ್ಲಿಸಿದ್ದಾರೆ; ಕಳ್ಳನು ಪಹರೆಯುವರನ್ನೆಲ್ಲಾ ಹೊಡೆಯುವನು, ಆದರೆ ಪಹರೆಯುವನೊಬ್ಬನಾದರೂ ಕಳ್ಳನ ಮೇಲೆ ಕೈಮಾಡಲಾರನು.*

೬೯ ಕಾಡಿಗೆ ಕಾಡೇ ಹತ್ತಿ ಉರಿದುಹೋದರೂ ಜೋಗಿಯ ಲಂಗೋಟಿ ಸುಟ್ಟಿಲ್ಲ.

೭೦ ಕಾಯುವರು ಹಲಬರೂ; ಕಾವ ಗೊಲ್ಲರ ಕಾಣೆ; ಮೇಯುವುದು ಮರನ ನುಣ್ಣಗೆ.§

೭೧ ಕಾಲಶರಧಿಯಲಿ ಸರಿಯುವ ನೌಕೆ, ನೆಲದಲಿ ಜಲದಲಿ ಹರಿಯುವ ನೌಕೆ, ಲೀಲಾಜಾಲದಿ ಮುಳುಗುವ ನೌಕೆ, ಒಲಿದರೆ ಹರಿ, ಎದ್ದೇಳುವ ನೌಕೆ.*

೭೨ ಕಾಲಿಲ್ಲ ಕೊಂಬುಂಟು, ಬಾಲದಾ ಪಕ್ಷಿಯದು; ಮೇಲೆ ಹಾರುವುದು ಹದ್ದಲ್ಲ.§

೭೩ ಕಾಲಿಲ್ಲ ಕೋಡಿಹುದು, ಬಾಲವಿದೆ ಮೃಗವಲ್ಲ; ಮೇಲಕ್ಕೆ ಹಾರುತಿಹೆ ನಾ ಹಕ್ಕಿಯಲ್ಲ; ಬಾಲಕರ ಮನವ ರಂಜಿಪೆನು ಹಗಲೆಲ್ಲ.§

೭೪ ಕಾಲಿಲ್ಲದಿದ್ದರೂ ಅರುಣನಲ್ಲ; ತಲೆಯಿಲ್ಲದಿದ್ದರೂ ಕರ್ಕಟನಲ್ಲ; ಕೈಗಳಿದ್ದರೂ ಬೆರಳುಗಳಿಲ್ಲದ ನನ್ನಿಂದ ಎಲ್ಲರೂ ಭೂಷಿಸುವರು.†

೭೫ ಕಾಲಿಲ್ಲದಿದ್ದರೂ ಭೂಲೋಕ ಸುತ್ತುವನು; ಕೈಯಿಲ್ಲದಿದ್ದರೂ ಭಾರವನ್ನೆತ್ತುವನು; ರೆಕ್ಕೆಯಿರದಿದ್ದರೂ ಗಗನವನು ಹತ್ತುವನು; ಇವನ ಸ್ವಾಗತಿಸದವ ಸ್ವಾಗತಿಪ ಮೃತ್ಯುವನು.*

೭೬ ಕಾಲುಗಳಿದ್ದೂ ನಡೆಯಲು ಸಾಗದು, ಕಣ್ಣುಗಳಿದ್ದೂ ನೋಡಲಿಕಾಗದು; ರೆಕ್ಕೆಗಳಿದ್ದೂ ಹಕ್ಕಿಯು ಅಲ್ಲ, ಹಲ್ಲುಗಳಿದ್ದೂ ಮೃಗ ತಾನಲ್ಲ.†

೭೭ ಕಾಲುಂಟು ನಡೆಯದದು, ಮೂಲೆಯಲಿ ಕಟ್ಟಿಹುದು; ಬಾಲಕರ ಸೊಮ್ಮ ಹೊರುವುದು.§

೭೮ ಕಾಲೊಂದೆಯಾದರೂ ಕುಣಿವಳ್ಳೈ ಭರದಿ, ಬಾಲೆ ಕುಣಿದಾದೊಡನೆ ನಿದ್ದೆಗದು ಸರದಿ.*

೭೯ ಕಾಸು ಖರ್ಚಿನಲ್ಲಿ ದೇಶ ಸುತ್ತಾಡುವನು.†

೮೦ ಕಾಳರಾತ್ರಿಯಲಿ ತೊಡಗುವ ಗಾನ, ತಾಳವಿಕ್ಕುತಲೆ ಅಡಗುವ ಗಾನ.*

೮೧ ಕಿರಿಯ ಮನೆಯಲ್ಲಿ ಕರಿಯ ಮುಂಡಾಸಿನ ಬಿಳಿಯ ಸಿಪಾಯಿಗಳು ಮಲಗಿರುವರು; ಹೊರಗೆ ಬಂದವರೆಲ್ಲ ಗೋಡೆಗೆ ತಲೆ ಬಡಿದು ಉರಿಕಾರಿ ಸಾಯುವರು.*

೮೨ ಕುದುರೆ ಓಡುತ್ತಾ ಇದೆ, ಕುಂಕುಮ ಚೆಲ್ಲುತ್ತಾ ಇದೆ.

೮೩ ಕೂತು ಮಾತಾಡುತ್ತ ಯಾತವನು ಹೊಡೆದಿಹರೆ? ಕಾತಕಾಯಿಗಳು ಹೆಡಗೆಯಲಿ ಮಿರುಗುವ ಸೌತೆಯಂತಿಹುದು.§

೮೪ ಕೆನ್ನೆಯಲಿ ಕುಡಿವಾಲ, ತನ್ನ ಸುತ್ತಲು ಮಣಿಯು, ತನ್ನ ದೇಹವನು ಬೀರುವುದು.§

೮೫ ಕೆರೆಯಲ್ಲಿ ಬೇರು, ಗಿರಿಯಲ್ಲಿ ಅಲರು.†

೮೬ ಕೆರೆಯಲ್ಲಿರುವ ಹಾವು, ಅದರ ಬಾಯಲ್ಲಿ ಗಿರಿಯಲ್ಲಿರುವ ಹಕ್ಕಿ.*

೮೭ ಕೆಳಗೆ ಬೀಳಲು ದುಬ್ಬಣ್ಣ, ಸುಲಿದು ನೋಡಲು ಕೆಂಪಣ್ಣ, ತಿಂದು ನೋಡಲು ಸಿಹಿಯಣ್ಣ.

೮೮ ಕೋಟೆಯು ಕಟ್ಟಿತು ಪರಿವಾರ, ಆಯಿತದೀತನ ಆಹಾರ; ಕೋಟೆಯುಲೀತನ ಸಂಸಾರ, ನೋಡಲು ಸುಂದರ, ಬಲುಕ್ರೂರ.*

೮೯ ಗಟ್ಟದಿಂದ ಎರಡು ಎತ್ತು ತಂದೆ, ಅವು ದಾರಿಯಲ್ಲಿ ಕಾರುತ್ತಾ ಬಂದವು.

೯೦ ಗಟ್ಟದಿಂದ ಹಲಿಗೆ ತಂದೆ, ಹೊರಮೈ ಯಾವುದು, ಒಳಮೈ ಯಾವುದು ಹೇಳಲಾರೆ.

೯೧ ಗಣಿಕೆಯಾ ಮೂಗಿನಲಿ ಮೊಣಕಾಲು ಹುಟ್ಟಿಹುದು; ತೃಣ ನುಂಡು ನೀರನುಣಲೊಲ್ಲದಂತದಕೆ ಎಣಿಕೆಯಿಲ್ಲ.§

೯೨ ಗರ್ಜಿಸುವನೆಂದರೆ ಸಮುದ್ರವಲ್ಲ; ನರ್ತಿಸುವನೆಂದರೆ ನರ್ತಕನಲ್ಲ; ಸ್ನಾನಕ್ಕೆ ಇಳಿದವನು ಮೇಲಕ್ಕೆ ಬರುವಾಗ ಕೊಳೆಯಾಗುವುದು ಮೈಯೆಲ್ಲ.

೯೩ ಗಿಡ್ಡ ಕರಿಯನಿಗೆ ಬಿಳಿಯ ನಾಮ.

೯೪ ಗಿಲಿಗಿಲಿ ತೋಟಕ್ಕೆ ಹೊಕ್ಕವರಾರು? ಗಿಲಿಸು ತುಂಬ ಹೂ ಚೆಲ್ಲಿದರಾರು?—ಅದರಂದಚಂದ ಮುಡಿಯೋರಿಲ್ಲ ಮುಕ್ಕೋರುಂಟು.

೯೫ ಗೂಡನ್ನು ಕಡಿದಿಹರೆ, ಓಡೆಲ್ಲ ಮಡಿಕೆಗಳು, ಓಡಬಿಡಿದಿಹರ್ರೆ, ಮಡಿಕೆಯೊಂದರ ಮೇಲೆ ಕೀಡಿಟ್ಟರೇನು?§

೯೬ ಗೂಡಿನಲ್ಲಿ ಒಂದು ಹಕ್ಕಿಯಿದೆ, ಅದನ್ನು ಯಾರಿಂದಲೂ ಮುಟ್ಟಲಾಗುವುದಿಲ್ಲ.

೯೭ ಚಟುಲ ಲೋಚನೆಯಂತೆ, ಕುಟಿಲಕುಂತಳೆಯಂತೆ, ವಿಟ ಹೆಣ್ಣಿನಂತೆ ಹಗಲಲ್ಲಿ; ಇರುಳು ಸಂಗಟನ ಕಾಯಂತೆ.§

೯೮ ಚಿಕ್ಕಚಿಕ್ಕ ದೇವಾಲಯ, ಕೆಂಪುಕೆಂಪು ದೇವರು, ಬಗ್ಗಿಬಗ್ಗಿ ನಮಸ್ಕಾರ.

೯೯ ಚಿಕ್ಕ ಮನೆ ತುಂಬ ಚೊಕ್ಕ ಮಕ್ಕಳು; ಪಕ್ಕದ ಗೋಡೆ ನೆಕ್ಕಿದವರೆಲ್ಲಾ ಬೆಂಕಿಕಾರಿ ಸಾಯುವರು.*

೧೦೦ ಚಿಕ್ಕವನು ಹೊಳೆಹೊಳೆವ, ಒಕ್ಕಣ್ಣ ಬಲು ಸೂಕ್ಷ್ಮ, ಅಕ್ಕರೆಯಾ ಕಣ್ಣೊಳಿರುವೊಂದು ರೋಮ ಪಕ್ವವಾಗಿಹುದು ಬಲು ಚೋದ್ಯ."

೧೦೧ ಚಿನ್ನ ಬಿಸಾಡಿ ಬೆಳ್ಳೀನ ನುಂಗೋದು.

೧೦೨ ಚುಚ್ಚಿದರೆ ತೂತಾಗುವುದಿಲ್ಲ, ಹರಿದರೆ ಸೀಳಾಗುವುದಿಲ್ಲ, ಸಾಲ ತೆಗೆದುಕೊಂಡರೆ ಕುಂದುವುದೇ ಇಲ್ಲ.

೧೦೩ ಜಲದ ಒಳಗಣ ಮೀನು ಹೊಳೆವ ಕೊಂಬಿನ ಮೇಲೆ ಬೆಳೆದ ಗಿರಿ ಕಂಡುಕೊಳುತಿರ್ಕು; ಕನ್ನಡದ ಒಳಗನಾರ್ಬಲ್ಲ?§

೧೦೪ ಜೀವವಿಲ್ಲದ ನನ್ನ ಹೊಡೆದು ನರನಳಿಸುವನು; ಈ ವಿಧಾನದಿ ಜನರ ಸಂತೋಷಗೊಳಿಸುವನು.*

೧೦೫ ಜೋಗಿ ಸುಟ್ಟರೂ ಲಂಗೋಟಿ ಸುಟ್ಟಿಲ್ಲ.

೧೦೬ ತಗ್ಗಿನ ದೇವರಿಗೆ ಬಗ್ಗಿಬಗ್ಗಿ ಶರಣಾರ್ಥಿ.

೧೦೭ ತಪದಲ್ಲಿ ಮೊದಲಿಗನು, ಸಿಂಗರದಿ ಎರಡನೆಯ ಪ್ರಾಣಿ, ಕೋಣೆಯಲಿ ಕೊನೆಯಾತನಿರೆ ಗೈವ ನರಸೆನ್ನ ಖೂನಿ.†

೧೦೮ ತಾಯಿ ಕೂತಿದ್ದಾಳೆ, ಮಗಳು ಎಲ್ಲೆಲ್ಲಿಯೂ ತಿರುಗಾಡುತ್ತಾಳೆ, ಮೊಮ್ಮಕ್ಕಳು ಮೂಲೆಮೂಲೆಗಳಲ್ಲಿ ಮಲಗಿದ್ದಾವೆ.

೧೦೯ ತಿನ್ನುವುದು ಒಂದೇ ತುತ್ತು, ತೇಗಿದರೆ ಹೋಯ್ತು ಸತ್ತು.

೧೧೦ ತುಂಟ ಹೈದಗೆ ಹಾರಾಟ, ದೊರೆ ಕೊಡೆ ಒಂದೂಟ.

೧೧೧ ತೆಂಗು ಬಟ್ಟಲ ನುಂಗಿ, ಮುಂಗಲಿಯನಿಲಿ ನುಂಗಿ, ಗಂಗಾ ಹಿಮಕರ ಹರ ನುಂಗಿ, ಜಗವು ಬೆಳದಿಂಗಳಂತಿಕ್ಕು §

೧೧೨ ತೋಟದ ಹೋತನ ಕೊಂಬು, ಮುಟ್ಟಿದರೆ ಮುರಿಯುವುದು, ಬಿಟ್ಟರೆ ಚಿಗುರುವುದು.

೧೧೩ ದಪ್ಪಗಿದೆ, ಕೆಂಪಗಿದೆ, ಹಂಚು ತಾನಲ್ಲ; ಕುಪ್ಪಳಿಸಿ ಹೊರಳುತಿದೆ ಕಪ್ಪೆಯೇನಲ್ಲ; ಇಪ್ಪುದದು ಬಾವಿಯೊಳು ಪ್ರಾಣಿ ಮೀನಲ್ಲ.

೧೧೪ ದಿಡ್ಡೀ ಬಾಗಿಲಲ್ಲಿ ಕೆಂಚಯ್ಯ ನಾಯಕ, ಅವನ ಸಹಾಯಕ್ಕೆ ಮೂವತ್ತೆರಡು ಮಂದಿ ಬಿಳಿಯ ಸಿಪಾಯಿಗಳು; ಒಳಗೆ ಬಂದವರನ್ನೆಲ್ಲ ಬಡೆದು ಮೆತ್ತಗೆಮಾಡಿ ಕೋಟೆಯೊಳಕ್ಕೆ ದಬ್ಬುವರು.

೧೧೫ ದೂರದಲ್ಲಿರುತ್ತಾ ಹಿರಿದಾಗಿಹನು, ಹತ್ತಿರ ಬರುತ್ತಾ ಕಿರಿದಾಗುವನು.*

೧೧೬ ನಮ್ಮಮ್ಮ ಉಟ್ಟಿಹಳು ಬಲು ಸುಂದರದ ನೀಲ ಸೀರೆ; ಅದರ ನೆರಿಗೆಯ ಸೌಂದರ್ಯ ಸಂಪತ್ತುಗಳನ್ನು ಬಣ್ಣಿಸುವವ ಜಗದೊಳಗೆ ಇಲ್ಲ.

೧೧೭ ನರಗಳಿವೆ ನರನಲ್ಲ; ಪಕ್ಷಿಯಿದೆ ಪಕ್ಷಿಯಲ್ಲ.

೧೧೮ ನಲ್ಲದೇವಾಸಾಲೆ ಹುಲ್ಲೆಗೊಂಬತ್ತು ಮುಖ, ಬೆಳ್ಳಿಲಿಗೆ ನಾಲ್ಕು ತನಿಗೋಡು ಮೂಡಿದ್ದನಿಲ್ಲಿಯೋ ಕಂಡೆ §

೧೧೯ ನಾಡೆಲೆಯ ಮೆಲ್ಲುವಳು, ಕೂಡೆ ಬೆಳ್ಳಗೆ ಬಾಯಿ; ಊಡಿದ ಅರಿವೆ ಮೊಲೆ ಕಟ್ಟನಾಕೆಯನು ಕಾಡಬೇಡ §

೧೨೦ ನಾನೊಂದಿಹೆ ಮೃಗವಣ್ಣ,—ನೆತ್ತರ ಹೀರುವ ಕಣ್ಣ; ಆನುವೆ ಹಲವಾರ್ ಬಣ್ಣ, ಮರಗಿಡಗಳೆ ಮನೆಯೆನ್ನ *

೧೨೧ ನಾವು ದೊಡ್ಡವರು ಚಿಕ್ಕವರೆಂದು ಭೇದವೆಣಿಸುವುದಿಲ್ಲ; ನಾವೀರ್ವರೂ ಜೊತೆಯಾಗಿರುವುದಿಲ್ಲ; ಒಬ್ಬನಿಗೆ ಮುಂದಿನ ವಾರ್ತೆ, ಮತ್ತೊಬ್ಬನಿಗೆ ಹಿಂದಿನ ವಾರ್ತೆ. ನಮ್ಮ ಕೆಲಸ ಸುಲಭಸಾಧ್ಯ.

೧೨೨ ನೀನೇಕೆ ನೋಡುವೆ ನನ್ನ? ನನಗೇಕೆ ಬಿಡುತಿಹೆ ಕಣ್ಣ?
ನೀವಾಳ್ವ ಕೆಲಸಕ್ಕೆಂದು ನಿಮ್ಮವರು ಕೊಟ್ಟರು ತಂದು!†

೧೨೩ ನೀರ ನಡುವೆ ಬಿಳುಪಣ್ಣ, ಅವನ ನಡುವೆ ಕಪ್ಪಮ್ಮ, ಅವರನ್ನು ಮುಚ್ಚುತ್ತಾನೆ ಬಾಗಿಲು ಗುಮ್ಮ.

೧೨೪ ನೀರಲ್ಲಿ ನೆಲದಲ್ಲಿ ಜೀವಿಸುವ ಪ್ರಾಣಿ,
ಸಾರಿದೆಡೆ ತನ್ನ ಮನೆ ಹೊತ್ತೊಯ್ವ ಪ್ರಾಣಿ!*

೧೨೫ ನೀರಲ್ಲಿ ಮುಳುಗಿರುತ್ತಾನೆ, ತಾನೇ ಅಳುತ್ತಾನೆ.

೧೨೬ ನೀರು ಕುಡಿದು ಬೆಂಕಿ ಕಾರುವುದು.*

೧೨೭ ನೂರ ಮುವತ್ತು ಗುರಿ, ಬೇರೆ ಹನ್ನೊಂದು ತಲೆ, ಊರಿದ ವೆರಡು ಸಮಪಾದ, ಮತ್ತೆರಡನೂರ ಜೋಕು.§

೧೨೮ ನೂರಾರು ನಾಲಗೆಗಳಿದ್ದೂ ನಾನು ಚಿತ್ರವಲ್ಲ;
ಎಲ್ಲರೂ ನನ್ನಲ್ಲಿ ಕಾಣುವರು ವಿಚಿತ್ರವೆಲ್ಲ!†

೧೨೯ ನೂರಾರು ಬ್ರಾಹ್ಮಣರಿಗೆ ಒಂದೇ ಜುಟ್ಟು.

೧೩೦ ನೆಟ್ಟಗಿರೋ ಮರಕ್ಕೆ ನೆರಳಿಲ್ಲ.

೧೩೧ ನೆಲದಲ್ಲಿ ಹುಟ್ಟಿರುವೆ; ಕೊಕ್ಕುಂಟು, ಕೂಗಲರಿಯೆ; ರೆಕ್ಕೆಯುಂಟು, ಹಾರಲರಿಯೆ; ಮುಟ್ಟಿದರೆ ಕಚ್ಚಲರಿಯೆ, ಕಚ್ಚಿದರೆ ಕಿಚ್ಚು ಬಹಳ.

೧೩೨ ನೋಡಡಿಯು ನಾಗಾಲ. ಮೇಲ್ ಹಾಗಾಲ;
ಹಿಂದಕಿರುವಾ ಬಾಲ, ಮುಂದಕಿರುವೀ ಬಾಲ;
ತಲೆಯೊಳನ್ನೊಂದು ತಲೆ! ಹೇಳದೇನೆಲೊ ಬಾಲ?*

೧೩೩ ಪರಿಮಳವಿಲ್ಲದೆ ಬಿರಿಯುವ ಹೂವು,
ಪರಿಕಿಸಿದರೆ ಎಸಳೆಂಟರ ಹೂವು,
ಮಳೆಗೂ ಬಿಸಿಲಿಗು ಅರಳುವ ಹೂವು
ತಲೆಮೇಲೆಲ್ಲರು ಧರಿಸುವ ಹೂವು.*

೧೩೪ ಪ್ರಥಮದಲಿ ಹುಲಿಯಂತೆ, ದ್ವಿತೀಯದಲಿ ಇಲಿಯಂತೆ, ತೃತಿಯದಲಿ ತಾನು ಕಪಿಯಂತೆ.§

೧೩೫ ಪ್ರಾಣವಿದ್ದಷ್ಟು ದಿನ ಹೊಡೆಯೆ ನಾನಳುವುದಿಲ್ಲ;
ಪ್ರಾಣಬಿಟ್ಟ ಮೇಲೆ ಅಳುವೆನ್ನ ಹೊಡೆದಾಗಲೆಲ್ಲ.*

೧೩೬ ಪ್ರಾಣವಿಲ್ಲ ಹಾರುತ್ತೆ; ಜೀವವಿಲ್ಲ ಕೂಗುತ್ತೆ.

೧೩೭ ಬಗ್ಗಿದರೆ ಮೊಗ್ಗು, ಎದ್ದರೆ ಹೂವು; ಪರಿಮಳವಿಲ್ಲ, ಬಾಡುವುದಿಲ್ಲ.

೧೩೮ ಬರುತ್ತಾನೆ, ಹೋಗುತ್ತಾನೆ; ಎಲ್ಲೆಡೆಯು ಮುಟ್ಟಿ ಆಲುಗಿಸುತ್ತಾನೆ; ಅವನ ಕಂಡವರೂ ಕಾಣೆ, ಬರೆದವರೂ ಕಾಣೆ.†

೧೩೯ ಬರುವುದು ಪಾತಾಳಲೋಕದಿಂದ, ಇರುವುದು ಭೂಲೋಕದಲ್ಲಿ, ಮೆರೆವುದು ಸ್ವರ್ಗಲೋಕದಲ್ಲಿ*

೧೪೦ ಬರುವುದು ಸ್ವರ್ಗಲೋಕದಿಂದ, ಇರುವುದು ಭೂಲೋಕದಲ್ಲಿ, ಹರಿವುದು ಪಾತಾಳಲೋಕಕ್ಕೆ.*

೧೪೧ ಬಾಲದಿಂದ ನೀರು ಕುಡಿಯುವ ಹಾವು, ಬಾಯಿಂದ ಬೆಂಕಿ ಕಾರುವ ಹಾವು.*

೧೪೨ ಬಿಸಿಲಿಗೆ ಅರಳುವ ಹೂವು, ಸೆರಳಿಗೆ ಮುದುಡುವ ಹೂವು.*

೧೪೩ ಬಿಸಿಲಿಗೆ ಆಗುವ ಬೆಳೆ, ಮಳೆಗೆ ಹೋಗುವ ಬೆಳೆ.*

೧೪೪ ಬಿಳಿಯ ಕೆರೆ, ಅದರಲ್ಲಿ ಕರಿಯ ಬಟ್ಟಲು ತೇಲಾಡುತ್ತಿದೆ.

೧೪೫ ಬಿಳಿಯ ಗದ್ದೆ, ಕರಿಯ ಬೆದೆ; ಕೈಯಿಂದ ಬಿತ್ತುವರು, ಬಾಯಿಂದ ಎತ್ತುವರು.

೧೪೬ ಬಿಳೀ ಸಿಪಾಯಿಗಳ ನಡುವೆ ಕೆನ್ನಾಗಂಜ.

೧೪೭ ಬೆಟ್ಟದಂತಾನೆಯೂ ಬಟ್ಟೆಯಲಿ ಬರಿ ಕಂಡ್ರು, ಕಟ್ಟಿದರ್ ಕಣ್ಣಿ ಹರಿದಿದರ್ ಕಂಚಿಯು ಹುಟ್ಟಿದುದ ಕಂಡೆ.§

೧೪೮ ಬೆಟ್ಟದ ಮೇಲಿನ ನೀರೆ, ಅವಳು ಉಟ್ಟಿಹಳು ಕಾಗಿನ ಸೀರೆ; ಅವಳ ಸೆರಿಯಲ್ಲಿ ಅರುವತ್ತು ಕಣ್ಣು, ಅವಳ ಸೆರಗಿನಲಿ ನೂರಾರು ಹೊನ್ನು.

೧೪೯ ಬೆಳಕಿನಲ್ಲೇ ಬರುವ ಕರಿಯ ಕಳ್ಳ.

೧೫೦ ಮಕ್ಕಳು ತುಂಬಾ ಅಲ್ಲಿ, ಮನೆಯಿಲ್ಲ; ಮನೆಯಾದರೂ ಒಲೆಯಿಲ್ಲ; ಒಲೆಯಿದ್ದರೂ ಅಡುಗೆಯಿಲ್ಲ; ಅಡುಗೆಯಿದ್ದರೂ ಹೊಟ್ಟೆಗಿಲ್ಲ.

೧೫೧ ಮಟ್ರಕಪ್ಪೆ, ಎರಡು ಕೆರೆಯ ನೀರು ಕುಡಿಯುತ್ತದೆ.

೧೫೨ ಮದುವೆಗೆ ಮುಂಚೆ ಹೊಡೆದರೆ ತಡೆದಾಳು, ಮದುವೆ ಆದ ಮೇಲೆ ಹೊಡೆದರೆ ತಡೆದಾಳೆ?

೧೫೩ ಮನೆಮನೆ ನೆಲಸಿದ ಭಾರದ ಅಜ್ಜಿ,
ತಿನಿಸುಣಿಸಿಗೆ ಮೊದಲಿವಳದೆ ಗೌಜಿ.†

೧೫೪ ಮನೆಯಲ್ಲಿದ್ದರೆ ಲಿಂಗಾಕಾರ, ಹೊರಕ್ಕೆ ಹೊರಟರೆ ಚಕ್ರಾಕಾರ.

೧೫೫ ಮರ ತುಂಬ ಎಲೆ, ಎಲೆಗೆ ಒಂದು ಮೈ ಬಿಳುಪು, ಒಂದು ಮೈ ಕಪ್ಪು.*

೧೫೬ ಮರದ ಮೇಲ್ಹತ್ತು ಗಿಳಿ, ಕೊಂಬೆಯ ಮೇಲೈದು ಗಿಳಿ; ಹಾರಿದಕೊಂದು ಗಿಳಿ ಉಳಿಯುವುದೆಷ್ಟು ಗಿಳಿ?

೧೫೭ ಮಳೆ ಬಂದರೆ ಪೈಗೆ ಪೀತಾಂಬರ, ಇಲ್ಲದಿದ್ದರೆ ತಾನು ದಿಗಂಬರ.*

೧೫೮ ಮಳೆಯಿಲ್ಲದೆ ಬೆಳೆಯಿಲ್ಲದೆ ಹೊಲ ಹಚ್ಚಗಾಯಿತು; ಎಲೆಯಿಲ್ಲದೆ ಅಡಿಕೆಯಿಲ್ಲದೆ ತುಟಿ ಕೆಂಪಗಾಯಿತು.

೧೫೯ ಮೀನ ಮುಟ್ಟದ ವಾರಿ, ಮೀನಕೇತನವೈರಿ ಮಾನವರಿಗಾಗಿ ಪಡೆದಿಹನು.§

೧೬೦ ಮುಂಜಾನೆ ಕಣ್ತೆರೆಯುವುದು, ಸಂಜೆ ಕಣ್ಮುಚ್ಚುವುದು.*

೧೬೧ ಮುಳ್ಳುಂಟು, ಗಿಡವಲ್ಲ; ನಾಲಗೆಯುಂಟು, ಪ್ರಾಣಿಯಲ್ಲ; ಬೊಪ್ಪೆಯುಂಟು ತಲೆಯೇ ಇಲ್ಲ; ಓಡಾಡುವುದು ಕಾಲಿಲ್ಲ; ಕಾರುತ್ತದೆ ಹೋದಲ್ಲೆಲ್ಲ.

೧೬೨ ಮೂಡ್ಲಾಗಿಂದ ಬಂದಾವು ಮುನ್ನೂರು ಕೈದೀಪ, ಎಣ್ಣೆ ಬೇಡದಕೆ, ಸೆಣೆ ಬೇಡ, ಆ ದೀಪ ಸತ್ಯದಿಂದುರಿಗು, ಜಗಜ್ಯೋತಿ.

೧೬೩ ಮೂರು ಕಣ್ಣುಂಟು, ಈಶ್ವರನಲ್ಲ; ಜುಟ್ಟುಂಟು, ಬ್ರಾಹ್ಮಣನಲ್ಲ; ನೀರುಂಟು, ಕೆರೆಯಲ್ಲ; ಬಿಳಿಯುಂಟು, ಸುಣ್ಣವಲ್ಲ; ಸಿಹಿಯುಂಟು, ಸಕ್ಕರೆಯಲ್ಲ.

೧೬೪ ಮೂರು ಕಾಲಲಿ ನಿಂತು ಮೀರಿ ಮರನೇರುವುದು, ಆರಾರಿ ನೀರ ಕುಡಿವುದು.§

೧೬೫ ಲೋಗರಾ ಕಣ್ಣು, ನೋಡಲಿಕೆ ಹೊನ್ನು; ಕೈಗೆಟಕನವನು, ಕಣ್ಣಿಗೆಟಕುವನು.*

೧೬೬ ವೃಕ್ಷಸಾಮ್ರಾಜ್ಯದಲ್ಲಿ ಲಕ್ಷದೀಪೋತ್ಸವ.

೧೬೭ ಶಿಕ್ಷಕನಾದರೂ ಪಂಡಿತನಲ್ಲ, ಬಂಧಿತನಾದರೂ ದಂಡಿತನಲ್ಲ, ಕರಭೂಷಣನಾದರೂ ಆಭರಣವಲ್ಲ *

೧೬೮ ಸಣ್ಣ ದೊಡ್ಡವನಲ್ಲ, ಅಣ್ಣನರಿವುದು ಅಲ್ಲ; ಹಣ್ಣಿಕ್ಕು ಲೋಕದೊಳಗೆಲ್ಲ §

೧೬೯ ಸಂದ ಮೇಲ್ಸಡುತಿಹುದು, ಬೆಂದ ಮೇಲುರಿಯುವುದು, ಬಂಧುಗಳನೆದ್ದು ಬಡಿಯುವುದು.§

೧೭೦ ಸರಸರನೆ ಸರಿಯುವುದು ಹಾವು ತಾನಲ್ಲ; ಕೊರಳಲ್ಲಿ ದಾರವಿದೆ ಹಾರ್ವ ತಾನಲ್ಲ, ಸ್ವರವಿಹುದು ಗುಡುಗಿನೊಲು ಗುಡುಗು ತಾನಲ್ಲ †

೧೭೧ ಸಾದು ಬಟುವಾಗಿಹುದು, ಚಕ್ರ ತಾನಲ್ಲ;
ಪಾದ ಮೂರದಕುಂಟು ಭೃಂಗೀಶನಲ್ಲ;
ಸ್ವಾದಕ್ಕೆ ಮೊದಲುಂಟು ಮೆಲುವುದಕ್ಕಿಲ್ಲ;
ಮೇದಿನಿಯ ಜಾಣರೇ ಹೇಳಿ ನೀವೆಲ್ಲ!

೧೭೨ ಸಾವಿರ ಕಣ್ಣುಂಟು–ವಿಶ್ವರೂಪಲ್ಲ; ಮೃಗವ ಹಿಡಿವ-ಸಜೀವ ಪ್ರಾಣಿಯಲ್ಲ; ನೀರೊಳಗೂ ಬೇಟೆಯಾಡುತ್ತಾನಲ್ಲ!

೧೭೩ ಸುತ್ತಮುತ್ತಲೂ ಬೇಲಿಯ ಕಟ್ಟಿ, ಸುವ್ಯಾಲಯ್ಯನ ಕಾವಲಿರಿಸಿ, ಹೂ ಅರಳಿದರೆ ತೋಟ ಹಾಳು.

೧೭೪ ಸುತ್ತಲೂ ಬೇಲಿ, ನಡುವೆ ಸರ್ವಾಧಿಕಾರಿ ಹಾವು.

೧೭೫ ಸುತ್ತುವುದು ಸುತ್ತುವುದು, ಮಾಲೆ ತಾನಲ್ಲ; ವಿಸ್ತರಿಸಿ ಒರೆಯುತಿದೆ, ಕಂಠ ಮೊದಲಿಲ್ಲ; ಪೆಟ್ಟಿಗೆಯು ತುಂಬುತಿದೆ, ಆಭರಣವಲ್ಲ.

೧೭೬ ಸುತ್ತು ಸುತ್ತು ತಿರುಗುತಿರುವೆ ನನಗಾಗಿ,
ಮೇಲೊಬ್ಬ ಕೂತಿದ್ದಾನೆ ನಿನಗಾಗಿ.

೧೭೭ ಸೂರ್ಯನಿಗೆ ಬೇಡವಾಗಿ, ಚಂದ್ರನಿಗೆ ಪ್ರಿಯವಾಗಿ, ನಿಮಗೆಲ್ಲ ಬೇಕಾಗಿ ಇರುವ ನಾನಾರು?

೧೭೮ ಸೂರ್ಯನಿಗೆ ಮೊಳಗಿ, ಚಂದ್ರನಿಗೆ ಮುದುರಿ, ನೀರಿನಲ್ಲಿ ಒರಗಿರುವೆ.

೧೭೯ ಸೃಷ್ಟಿಯನು ಆಳುವಗೆ ಹುಟ್ಟಿದನು ಮಗನೊಬ್ಬ, ಅಟ್ಟಿಗಳು ಬೇರೆ, ಕಳೆ ಬೇರೆ, ಅವನಿಗೆ ಕೊಟ್ಟ ವರ ಬೇರೆ §

೧೮೦ ಸೊಂಟ ಮುರಿದರೆ ತಂಟೆ ಮುಗಿಯಿತು.*

೧೮೧ ಹಗಲಿನಲ್ಲಿ ತೆರೆದಿರುವ ಮನೆ, ಇರುಳಿನಲ್ಲಿ ಮುಚ್ಚಿರುವ ಮನೆ.*

೧೮೨ ಹಗಲಿನಲ್ಲಿ ಮುಚ್ಚುವ ಪುಸ್ತಕ, ಇರುಳಿನಲ್ಲಿ ತೆರೆಯುವ ಪುಸ್ತಕ.*

೧೮೩ ಹಗಲು ಹೊತ್ತಿಗೆ ಮಾತ್ರ ಎರಡು ಸಲ ಊಟವಿದ್ದರೂ ಆದಿತ್ಯವಾರ ಉಪವಾಸ; ವರ್ಗಾನುಸಾರವಾಗಿ ಬಡಿಸುವ ಈ ಊಟವು ಹೊಟ್ಟೆಯನ್ನು ತುಂಬದಿದ್ದರೂ ತಲೆಯನ್ನು ತುಂಬುವುದು.

೧೮೪ ಹತ್ತಿದರೆ ಕೆಂಪು, ಹೋದರೆ ಕಪ್ಪು; ಅದು ತಿಂದು ಬಿಟ್ಟದ್ದೆಲ್ಲ ನಮಗೆ ಸೊಂಪು.

೧೮೫ ಹತ್ತು ಎಂದರೆ ಹತ್ತದು, ಇಪ್ಪತ್ತೆಂದರೆ ಹತ್ತುತ್ತೆ.

೧೮೬ ಹತ್ತು ಶಸ್ತ್ರಗಳನ್ನು ಮೈಯಲ್ಲಿ ಧರಿಸಿದ ಸಿಪಾಯಿಯೊಬ್ಬ; ಅವನನ್ನು ಹೊತ್ತು ತಂದವರು ಐದು ಮಂದಿ; ಕೊಂದವನು ಇನ್ನೊಬ್ಬ, ತಿಂದವನು ಮತ್ತೊಬ್ಬ.

೧೮೭ ಹರೆಯಲ್ಲಿ ಹಸುರಾಗಿ, ನರೆಯಲ್ಲಿ ಕೆಸುವಾಗಿ, ಸುರರಿಗೆ ಸಿಗದ ಅಮೃತ ನರರಿಂಗೆ ದೊರೆಯುವುದು.§

೧೮೮ ಹಸಿಮರ ತುಂಬಾ ಹುಸೀ ಕಿಡಿಗಳು.*

೧೮೯ ಹಸುರು ಕಡ್ಡಿ, ಮೇಲೆ ಮುತ್ತಿನ ಟೋಪಿ.

೧೯೦ ಹಾರುವುದು, ಪ್ರಾಣವಿಲ್ಲ; ತೂರುವುದು, ತ್ರಾಣವಿಲ್ಲ.†

೧೯೧ ಹಿಂದಕ್ಕೆ ಬಾ ಎಂದು ಎಳೆದರೆ ಮುಂದಕ್ಕೇ ಹೋಗುತ್ತದೆ.

೧೯೨ ಹುಟ್ಟಿದ ಮರದಿಂದ ಸರಿಯುವ ಹೂವು,
ಕಟ್ಟಿದ ಮರದಲ್ಲಿ ಮೆರೆಯುವ ಹೂವು *

೧೯೩ ಹುಟ್ಟಿರುವೆನಾದರೂ ಹುಟ್ಟಿದವನೆನ್ನಿಸುವೆ, ಜುಟ್ಟು ತಲೆಗಿರದಿದ್ದರೂ ಇಹುದೆನಗೆ ಇಷ್ಟೊಂದು ಗಡ್ಡ §

೧೯೪ ಹುಟ್ಟಿಸಿದ ತಂದೆ, ಮುಟ್ಟಿಸಲು ಕೊಂದೆ §

೧೯೫ ಹುಟ್ಟಿಸಿದ ತಾಯಿ, ಮುಟ್ಟಿದರೆ ಸಾಯಿ.*

೧೯೬ ಹುಡುಗ ಕುಳ್ಳ, ಮೈತುಂಬ ಮುಳ್ಳ, ಹೃದಯ ಬಲು ಪರಿಮಳ.

೧೯೭ ಹೆತ್ತ ಮಕ್ಕಳನ್ನು ಹಗಲಲ್ಲಿ ಕೂರಿಸ್ತಾಳೆ,
ಸುತ್ತಮುತ್ತಲಿನ ಜಗವನ್ನು ತೋರಿಸ್ತಾಳೆ §

೧೯೮ ಹೊಂದೇರೊಂದೇರುತ ಬರುವ, ಮುಂದೇರೊಂದೇರುತಲಿರುವ;
ಸಂದೇರೊಂದೇರುತಲಿಳಿವ, ಒಂದೂರಿಂದೂರಿಗೆ ಸುಳಿವ.*

೧೯೯ ಹೊರಗಂಟು, ಒಳ ಸಿಹಿ, ಕೈಯಿಕ್ಕೋವೇ ನಹು ಕಹಿ.

೨೦೦ ಹೊರ ತುಂಬ ಸಣ್ಣ ಮೊಳೆಗಳ ದೊಡ್ಡ ಕೋಟೆ; ಒಳ ತುಂಬ ಬಿಳಿಯ ಕಂಬಗಳ ನಡುವೆ ಹಳದಿ ಕೋಣೆಗಳು; ಅವುಗಳಲ್ಲಿ ಬಿಳಿಯ ಜಟ್ಟಿಗಳು. §

೨೦೧ ಹೋದಾ ಪುಟ್ಟ, ಬಂದಾ ಪುಟ್ಟ; ಪುಟ್ಟನ ಹೆಜ್ಜೆ ಕಂಡವರೇ ಇಲ್ಲ.

೨೦೨ ಹೋಪಾಗ ಕರಿಯ, ಬಪ್ಪಾಗ ಕೆಂಪ.

---

* ಈ ಗುರುತಿನ ಒಗಟುಗಳು ಸ್ವಂತ.

† ಈ ಗುರುತಿನ ಒಗಟುಗಳು ತಿದ್ದಲ್ಪಟ್ಟವು.

§ ಈ ಗುರುತಿನ ಒಗಟುಗಳು ಸರ್ವಜ್ಞವಿರಚಿತ.

—ಲೇಖಕ.

ಉತ್ತರಗಳು

೧ ಕಣ್ಣುಗಳು. ೨ ಹಣತೆ, ಬತ್ತಿ, ಉರಿ. ೩ ಬೀಸುವ ಕಲ್ಲು. ೪ ಹಣೆಯು ಬೊಟ್ಟು. ೫ ತಾಂಬೂಲ (ಅಡಿಕೆ, ಸುಣ್ಣ, ವೀಳ್ಯದೆಲೆ). ೬ ಜೋಡು. ೭ ಗೇರು ಹಣ್ಣು, ಬೀಜ. ೮ ಮುಳ್ಳು ಹಂದಿ. ೯ ಮೋಡ, ಮಳೆ, ಮಿಂಚು.* ೧೦ ಸೂರ್ಯೋದಯ.* ೧೧ ಕಹಳೆ. ೧೨ ಮಳೆ, ಬೆಳೆ. ೧೩ ನೀರು ತರಲು ಹೋದಾಗ ಮಳೆ ಬಂತು; ಮಳೆ ನಿಂತ ಮೇಲೆ ನೀರು ತಂದೆ. ೧೪ ಕಣ್ಣುಗಳು. ೧೫ ಹಣತೆ, ಎಣ್ಣೆ, ಬತ್ತಿ, ಉರಿ. ೧೬ ಔಷಧ. ೧೭ ಆಕೆ=ನೀರು; ಈಕೆ=ಮಳೆ; ಆಕೆಮನೆ=ಬಾವಿ.* ೧೮ ತೆಂಗಿನ ಕಾಯಿ. ೧೯ ದಿನ, ಮಾಸ, ಋತು, ವರ್ಷ. ೨೦ ಸೊಣ. ೨೧ ಕತ್ತರಿ. ೨೨ ಆಕಳ ಹಾಲು. ೨೩ ಅಶ್ವತ್ಥದ ಮರ. ೨೪ ಜೇನು. ೨೫ ರೇಷ್ಮೆ. ೨೬ ಹಾಸಿಗೆ. ೨೭ ಗಡಿಯಾರ. ೨೮ ಬಂದೂಕು. ೨೯ ಮೆಟ್ಟು. ೩೦ ಚಾಣ. ೩೧ ಬೆಳ್ಳುಳ್ಳಿ. ೩೨ ಮನುಷ್ಯ. ೩೩ ಚೋಟಿ (ತೇರಟೆ). ೩೪ ಬಿಸಿಲು. ೩೫ ಮಾರ್ಗ. ೩೬ ಸಾಬೂನು. ೩೭ ಸೂರ್ಯ, ಚಂದ್ರ. ೩೮ ? ೩೯ ಕಪ್ಪೆ. ೪೦ ಮೂಗಿನ ಸೊಳ್ಳೆಗಳು, ಉಸಿರು. ೪೧ ಸೂರ್ಯ ಅಥವಾ ಚಂದ್ರ. ೪೨ ಹೊಗೆಬತ್ತಿ. ೪೩ ಮೋಡ.* ೪೪ ಸೂರ್ಯ. ೪೫ ಬುಗರಿ. ೪೬ ಹಲಸಿನ ಹಣ್ಣು. ೪೭ ಕೈ, ಬೆರಳುಗಳು. ೪೮ ಹಲ್ಲುಗಳ ಸಾಲು, ನಾಲಿಗೆ. ೪೯ ಕಣ್ಣುಗಳು. ೫೦ ಹೆಣ್ಣು. ೫೧ ವರ್ಷ, ಮಾಸ, ದಿನ, ಪಕ್ಷಗಳು. ೫೨ ಮೋಡ, ಗುಡುಗು, ಮಿಂಚು, ಮಳೆ. ೫೩ ಹಿಡಿಕುಂಟೆ, ಕಡ್ಡಿಗಳು. ೫೪ ವಾಕ್ಯ. ೫೫ ಬೆಕ್ಕು. ೫೬ ಚಪ್ಪಲಿ ಜೋಡು. ೫೭ ಒಲೆ. ೫೮ ಬುಗರಿ. ೫೯ ತೆಂಗಿನಕಾಯಿ. ೬೦ ಚಲಚ್ಚಿತ್ರ. ೬೧ ಕೂದಲು. ೬೨ ಮಡಕೆ, ಮೊಸರು, ಕಡೆಗೋಲು. ೬೩ ಬೆರ್ಚಪ್ಪ. ೬೪ ಅಂಗಿ. ೬೫ ಒಲೆಯು ಬಾಯಿ, ಅದರ ಮೇಲೆ ಮಿನುಗುವ (ಉರಿದ್ದಾರುವ) ಮಸಿಯು ಕಿಡಿಗಳು. ೬೬ ಕಟ್ಟಿರುವೆಯು ಸಾಲು. ೬೭ ಉಪ್ಪು. ೬೮ ನಾಲಿಗೆ, ಹಲ್ಲುಗಳು. ೬೯ ಕಾಡಿನೊಳಗಿನ ಕಾಲುದಾರಿ. ೭೦ ಕಾಳ್ಗಿಚ್ಚು.* ೭೧ ಸಂಸಾರ ನೌಕೆ. ೭೨ ಗಾಳಿಪಟ. ೭೩ ಗಾಳಿಪಟ. ೭೪ ಅಂಗಿ ೭೫ ಗಾಳಿ. ೭೬ ಬಾವಲಿ. ೭೭ ತೊಟ್ಟಿಲು. ೭೮ ಬುಗರಿ. ೭೯ ಟಪ್ಪಾಲು ಕಾರ್ಡ. ೮೦ ಸೊಳ್ಳೆಯು ಗಾಯನ. ೮೧ ಬೆಂಕಿ ಪೆಟ್ಟಿಗೆ, ಕಡ್ಡಿಗಳು. ೮೨ ಬೀಸುವ ಕಲ್ಲು, ಹಿಟ್ಟು. ೮೩ ರಾಟೆಯಿಂದ ನೂಲುವುದು, ನೂಲಿನ ಹಂಜಿಗಳು. ೮೪ ಮೀನುಬಲೆ. ೮೫ ದೀಪ. ೮೬ ದೀಪ. ೮೭ ಮಾವಿನ ಹಣ್ಣು. ೮೮ ಹುತ್ತ, ಗೆದ್ದಲು, ಹಾವು. ೮೯ ಹಲಸಿನ ಹಣ್ಣುಗಳು. ೯೦ ಕನ್ನಡಿ [illegible]ಳು. ೯೧ ಒಲೆ, ಕಟ್ಟಿಗೆ, ಬೆಂಕಿ.* ೯೨ ಕಡೆಗೋಲು. ೯೩ ಉದ್ದು. ೯೪ ಅರಳು. ೯೫ ಈಚಲ (ತೆಂಗಿನ) ಮರದ ಮೇಲೆ ಇರಿಸಿರುವ ಹೆಂಡ ಹಿಡಿಯುವ ಮಡಕೆಗಳು. ೯೬ ದೇಹದಲ್ಲಿರುವ ಪ್ರಾಣ. ೯೭ ಕಮಲ.* ೯೮ ಒಲೆ, ಬೆಂಕಿ, ಊದುವುದು. ೯೯ ಬೆಂಕಿ ಪೊಟ್ಟಣ, ಕಡ್ಡಿಗಳು. ೧೦೦ ಸೂಜಿ, ದಾರ.

೧೦೧ ಬಾಳೆಹಣ್ಣು. ೧೦೨ ಬೆಂಕಿ. ೧೦೩ ಹಣತೆ, ಬತ್ತಿ, ಉರಿ.* ೧೦೪ ಮದ್ದಳೆ. ೧೦೫ ಕಾಡು, ಕಾಲುದಾರಿ. ೧೦೬ ಒಲೆಯ ಬೆಂಕಿ ಊದುವುದು. ೧೦೭ ತಗಣೆ. ೧೦೮ ಬೇರು, ಬಳ್ಳಿ, ಕುಂಬಳ ಕಾಯಿಗಳು ೧೦೯ ಕೋವಿ. ೧೧೦ ನೊಣ. ೧೧೧ ? ೧೧೨ ಬಸವನ ಹುಳ (ಹಿಸುಕು). ೧೧೩ ನಾಲಿಗೆ. ೧೧೪ ನಾಲಿಗೆ, ಹಲ್ಲುಗಳು. ೧೧೫ ಸೂರ್ಯ ಅಥವಾ ಚಂದ್ರ. ೧೧೬ ಸಮುದ್ರ. ೧೧೭ ಎಲೆ. ೧೧೮ ? ೧೧೯ ಮೇಕೆ. ೧೨೦ ಓತಿ, (ಹೆಂಟೆಗೊದ್ದ). ೧೨೧ ಹಾವು, ಚೇಳು. ೧೨೨ ಕನ್ನಡಿ. ೧೨೩ ಕಣ್ಣು. ೧೨೪ ಆಮೆ. ೧೨೫ ಕಪ್ಪೆ. ೧೨೬ ದೀಪದ ಬತ್ತಿ. ೧೨೭ ? ೧೨೮ ಪುಸ್ತಕ. ೧೨೯ ಮುಸುಕಿನ ಜೋಳ. ೧೩೦ ದಾರಿ. ೧೩೧ ಹಸಿ ಶುಂಠಿ. ೧೩೨ ಇಲಿಯನ್ನು ಬಾಯಲ್ಲಿ ಕಚ್ಚಿ ಹಿಡಿದಿರುವ ಬೆಕ್ಕು. ೧೩೩ ಕೊಡೆ. ೧೩೪ ಅಮಲುಖೋರರು. ೧೩೫ ಎತ್ತಿನ ಚರ್ಮ. ೧೩೬ ವಿಮಾನ. ೧೩೭ ಕೊಡೆ. ೧೩೮ ಗಾಳಿ. ೧೩೯ ಮರ. ೧೪೦ ಹೊಳೆ. ೧೪೧ ಬತ್ತಿ, ಎಣ್ಣೆ, ಉರಿ. ೧೪೨ ಕೊಡೆ. ೧೪೩ ಉಪ್ಪು. ೧೪೪ ಕಣ್ಣು. ೧೪೫ ಕಾಗದ, ಬರಹ. ೧೪೬ ಹಲ್ಲುಗಳು, ನಾಲಿಗೆ. ೧೪೭ ಮೋಡ, ಆಕಾಶ, ಮಿಂಚಿನ ಬಳ್ಳಿ * ೧೪೮ ನವಿಲು. ೧೪೯ ನೆರಳು. ೧೫೦ ಶಾಲೆ. ೧೫೧ ಮೊಲೆಯೂಡುವ ಮಗು. ೧೫೨ ಮಣ್ಣಿನ ಮಡಕೆ. ೧೫೩ ಕಡೆಯುವ ಕಲ್ಲು. ೧೫೪ ಬೀಸುವ ಕಲ್ಲು, ರಾಗಿ, ಹಿಟ್ಟು. ೧೫೫ ದಿನ, ಹಗಲು, ಇರುಳು. ೧೫೬ O. ೧೫೭ ಹೊಲ, ಬೆಳೆ. ೧೫೮ ಗಿಳಿ. ೧೫೯ ಸಿಹಿಯಾಳ. ೧೬೦ ತಾವರೆ. ೧೬೧ ಪೆನ್ನು. ೧೬೨ ಸೂರ್ಯ. ೧೬೩ ತೆಂಗಿನಕಾಯಿ. ೧೬೪ ಪುಸ್ತಕ. ೧೬೫ ಗಂಧ ಅರೆಯುವ ಸಾಣೆ. ೧೬೬ ಸೂರ್ಯ. ೧೬೭ ಮಿಣುಕು ಹುಳಗಳು. ೧೬೮ ಸೂಜಿ. ೧೬೯ ಮಿಳಾವಿನ ಸುತ್ತಿಗೆ. ೧೭೦ ಹಗ್ಗ ಕಟ್ಟಿ ಬಾವಿಗೆ ಇಳಿಸಿದ ಬಿಂದಿಗೆ. ೧೭೧ ಅಡ್ಡಣಿಗೆ (ಮೂರು ಕಾಲಿನ ಹಡಿವಾಣ). ೧೭೨ ಬಲೆ. ೧೭೩ ಕಣ್ಣು. ೧೭೪ ಹಲ್ಲುಗಳು, ನಾಲಿಗೆ. ೧೭೫ ಗ್ರಮೊಫೋನ್ ರಿಕಾರ್ಡ. ೧೭೬ ಗಾಳಕ್ಕೆ ಸಿಕ್ಕಿಸಿ ನೀರಿಗೆ ಬಿಟ್ಟ ಎರೆಹುಳು, ಮೀನು, ಗಾಳಗಾರ. ೧೭೭ ದೀಪ. ೧೭೮ ಕಮಲ. ೧೭೯ ಮೈಮೇಲಿಂದ ಕಳಚಿಟ್ಟ ಅಂಗಿ, ಇಜಾರು, ಕಿರೀಟ.* ೧೮೦ ಚೂರಿ. ೧೮೧ ತಾವರೆ. ೧೮೨ ಹಾಸಿಗೆ. ೧೮೩ ಶಾಲೆಯಲ್ಲಿ ವಿದ್ಯಾಭ್ಯಾಸ. ೧೮೪ ಬೆಂಕಿ. ೧೮೫ ತುಟಿಗಳು, ೧೮೬ ಏಡಿ, ಕೈಬೆರಳುಗಳು, ಕತ್ತಿ, ಬಾಯಿ. ೧೮೭ ಮಾವಿನ ಹಣ್ಣು. ೧೮೮ ಮಿಣುಕು ಹುಳಗಳು. ೧೮೯ ನೀರುಳ್ಳಿಯ ಹೂವು. ೧೯೦ ತರಗೆಲೆ. ೧೯೧ ಕೋವಿಯ ಕುದುರೆ. ೧೯೨ ಹೆಣ್ಣು. ೧೯೩ ಹೊಳೆ. ೧೯೪ ನೀರು, ಸಾಬೂನು. ೧೯೫ ನೀರು, ಉಪ್ಪು. ೧೯೬ ಗುಲಾಬಿ ಗಿಡ, ಹೂವು. ೧೯೭ ತಾಳೆಮರ, ಹಣ್ಣು. ೧೯೮ ಸೂರ್ಯ. ೧೯೯ ಮಾದಳೆ ಹಣ್ಣು. ೨೦೦ ಹಲಸಿನ ಹಣ್ಣು. ೨೦೧ ಮೀನು (ದೋಣಿ). ೨೦೨ ಕುಲುಮೆಯಲ್ಲಿ ಕಬ್ಬಿಣ.

---

* ಈ ಗುರುತಿನ ಉತ್ತರಗಳು ಸ್ವಂತ. —ಲೇಖಕ.

Edited, Printed & Published by K. V. Shenoy
at The Prabhat Printers Ltd., Mangalore.